## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಡ್ಲಘಟ್ಟ

## ಸಿ ಸಿ ನಂ.**1477/21**

ಸಿ ಡಬ್ಲ್ಯು.. **1**
ಪಿ ಡಬ್ಲ್ಯು.. **1**

ಸಾಕ್ಷಿದಾರರ ಹೆಸರು ... ಮಂಜುನಾಥ

ತಂದೆಯ ಹೆಸರು ... ಪಿ ನರಸಿಂಹರೆಡ್ಡಿ

ವಯಸ್ಸು ... **47** ವರ್ಷ

ಉದ್ಯೋಗ ... ವ್ಯವಸಾಯ

ವಾಸ ... ಗಡಿಮಿಂಚೇನಹಳ್ಳಿ ಗ್ರಾಮ

ಪ್ರಮಾಣವಚನದ ನಂತರದ ದಿಃ **07.09.2023**

### ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದ

ಆರೋಪಿತರು ಪರಿಚಯವಿಲ್ಲ. ಚಾಸಾ.2 ರಿಂದ 6 ರವರುಗಳು ನನ್ನ ಸಂಬಂಧಿ. ಚಾಸಾ.2 ರಿಂದ 3 ನನ್ನ ಸ್ನೇಹಿತರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಆ ದಾಖಲೆಯು ಪಿರ್ಯಾದಿಯಾಗಿದ್ದು ದಾಖಲೆಯನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 1 ವರ್ಷದ ಹಿಂದೆ ಹಾಕಿರುತ್ತೇನೆ. ನನ್ನ ಮತ್ತು ಆರೋಪಿತರ ನಡುವೆ ಆದ ಗಲಾಟೆಯ ಬಗ್ಗೆ ದೂರು ಕೊಟ್ಟಿರುತ್ತೇನೆ.

ದಿಃ 30.05.2021 ರಂದು ಸಂಜೆ 4 ರಿಂದ 4-35 ಸಮಯದಲ್ಲಿ 1 ನೇ ಆರೋಪಿ ಗಾಡಿಯಲ್ಲಿ ಬರುತ್ತಿದ್ದು ಗಾಡಿಯನ್ನು ನಿಲ್ಲಿಸಿ ನೋಡಿಕೊಂಡು ಹೋಗು ಎಂದು ಇಳಿದುಬಂದು ತಳಿಸಿದ . ವಿಜಿಕುಮಾರ್ ಮತುತ ರಮೇಶ್ ಬಂದು 1 ನೇ ಆರೋಪಿಯನ್ನು ಬೈದು ಮನೆಗೆ

ಕಳುಹಿಸಿದರು. ಅದೇ ದಿನ ರಾತ್ರಿ 9–30 ಸಮಯದಲ್ಲಿ 10 ಜನರು ಅದರಲ್ಲಿ ಆರೋಪಿತರನ್ನು ಒಳಕೊಂಡು ಕ್ರೂಸರ್ ವಾಹನದಲ್ಲಿ ಬಂದಿದ್ದರು. ಆರೋಪಿಗಳೆಲ್ಲರೂ ನನ್ನ ಮನೆಗೆ ಬಂದು ಹೊಡೆದು ಹೊರಟು ಹೋದರು . ಮಾರನೇ ದಿನ ಕೊತ್ತಂಬರಿ ಬೀಜ ಮತ್ತು ಗೊಬ್ಬರ ತರಲು ಸಾದಲಿಗೆ ಹೋದೆ ಆಗ 2 ಮತ್ತು 3 ನೇ ಆರೋಪಿ ನನ್ನನ್ನು ಎಳೆದುಕೊಂಡು ಹೋಗಿ ಕಲ್ಲಿನಲ್ಲಿ ಹೊಡೆದರು. ಇವಾಗಾದರೂ ಸಿಕ್ಕಿದ್ದಿಯಲ್ಲಾ ಬಾರೋ ಎಂದು ಬೈದು ಹಲ್ಲೆ ಮಾಡಿದರು. ಹಲ್ಲೆಯಿಂದಾಗಿ ನನ್ನ ತಲೆಯ ಎಡಭಾಗಕ್ಕೆ ಪೆಟ್ಟಾಗಿ ಹೊಲಿಗೆ ಬಿದ್ದಿರುತ್ತದೆ ಮತ್ತು ಗೋವಿಂದ ಸ್ವಾಮಿ , ಮುತ್ತುಲಕ್ಷ್ಮಿ ಮತ್ತು 2 ಮತ್ತು 3 ನೇ ಆರೋಪಿತರು ಹಲ್ಲೆ ಮಾಡಿರುತ್ತಾರೆ. ತದನಂತರ ನಾನು ಪೋಲೀಸರಿಗೆ ದೂರು ನೀಡಿದೆ ನಂತರ ಆಸ್ಪತ್ರೆಗೆ ದೂರನ್ನು ನೀಡಿದೆ. ದಿಃ 31.05.2021 ರಂದು ಪೊಲೀಸರು ನನ್ನ ಮತ್ತು ಇತರ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ 4 ರಿಂದ 5 ಗಂಟೆಯಲ್ಲಿ ಮಹಜರ್ ಬರೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಆ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ದಾಖಲೆಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಪೋಲಿಸರು ಮಹಜರ್ ಮಾಡಿ ನ್ಯಾಯಾಲಯದ ಮುಂದೆ ಇರುವ 2 ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅಮಾನತ್ತು ಮಾಡಿಕೊಂಡಿರುವ ಕಲ್ಲುಗಳು ಎಂದು ನುಡಿಯುತ್ತಾರೆ. ಅವುಗಳನ್ನು ಮೂಮ.1 ಮತ್ತು 2 ಎಂದು ಗುರುತಿಸಲಾಯಿತು.

ಗಲಾಟೆಯಲ್ಲಿ ಆರೋಪಿತರು ನನ್ನಿಂದ **11** ಸಾವಿರ ಹಣವನ್ನು ಕಿತ್ತುಕೊಂಡಿರುತ್ತಾರೆ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದುದ, ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃಃ**

ಆರೋಪಿತರು ನನ್ನನ್ನು ಅವಾಚ್ಯಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಸಿ ಕೆ ವಿ ವಕೀಲರಿಂದ**

ಆರೋಪಿತರು ಮೂಲತಃ ತಮಿಳುನಾಡಿನವರು ಎಂದರೆ ಸರಿ. 1 ನೇ ಆರೋಪಿಯ ವಾಹನವು ನನ್ನ ವಾಹನಕ್ಕೆ ಯಾವುದೇ ರೀತಿಯಲ್ಲೂ ತಾಗಲಿಲ್ಲ. ನಾನು ಪೊಲೀಸರಿಗೆ ತಗಲಿಲ್ಲ ಎಂದು ಹೇಳಿದ್ದೇನೆ. 1 ನೇ ಆರೋಪಿ ಗಾಡಿಯಿಂದ ಇಳಿದು ಹಲ್ಲೆ ಮಾಡಿದ ವಿಷಯವನ್ನು ಪೋಲೀಸರಿಗೆ ಹೇಳಿದ್ದೇನೆ. 10 ಜನರು ಕ್ರೂಸರ್ ವಾಹನದಲ್ಲಿ ಬಂದಿದ್ದರು ಎಂದು ನಾನು ನನ್ನ ಪಿರ್ಯಾದಿಯಲ್ಲಿ ಹೇಳಿದ್ದೇನೆ. ಮರುದಿನ ದೇವಸ್ಥಾನದ ಅಂಗಡಿ ಬಳಿ ಇರುವ ಗೊಬ್ಬರದ ಅಂಗಡಿಗೆ ಹೋಗಿದ್ದೆ. ತೊಗರಿಬೀಜ ತೆಗೆದುಕೊಳ್ಳುವ ಸಮಯದಲ್ಲಿ ಚಾಸಾ.2 ಮತ್ತು 3 ನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಆಗ ಸಮಯ ಬೆ.7.00 ಗಂಟೆಯಾಗಿತ್ತು. ಘಟನೆಗೂ ಮುನ್ನ ಆರೋಪಿತರ ಪರಿಚಯವಿತ್ತು . ಆರೋಪಿತರಿಗೆ ಸಂಬಂದಪಟ್ಟ ಜಮೀನು ನನ್ನ ಮನೆಯ ಬಳಿ ಇಲ್ಲ. ಘಟನೆ ನೆಡೆದ ಸ್ಥಳದಲ್ಲಿ ಚಾಸಾ.2 ರಿಂದ 4 ರವರು ಇದ್ದರು.

ಗಲಾಟೆ ನೆಡೆಯುವಾಗ ಚಾಸಾ.4 ಇದ್ದ , ಚಾಸಾ.2 ಮತ್ತು 3 ತದನಂತರ ಬಂದರು. 2 ನೇ ಆರೋಪಿ ಕಲ್ಲಿನಿಂದ ಹೊಡೆದಿಲ್ಲ. ಮೂಮ.1 ಮತ್ತು 2 ಸಾದಲಿ ಗ್ರಾಮದಲ್ಲಿ ಯತೇಚ್ಚವಾಗಿ ಇದೆ ಎಂದರೆ ಸರಿ . ನಾನೇ ಪೋಲೀಸರಿಗೆ ಮೂ.ಮ.1 ಮತ್ತು 2 ನ್ನು ಕೊಟ್ಟಿದ್ದು. ಹಲ್ಲೆ ಆದ ದಿನ ನನಗೆ ರಕ್ತ ಬಂದಿತ್ತು. ಚಾಸಾ.3 ಮತ್ತು 4 ಮತ್ತು ಮೂರ್ತಿ ಎನ್ನುವವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಬಟ್ಟೆಗೆ ರಕ್ತ ಕಲೆ ಹಾಕಿದ್ದು ಅದನ್ನ ಪೋಲೀಸರಿಗೆ ಕೊಟ್ಟಿದ್ದೇನೆ. ಘಟನಾ ಸ್ಥಳದಿಂದ ಆಸ್ಪತ್ರೆಗೆ ಹೋಗಿ ನಂತರ ಠಾಣೆಗೆ ಹೋದೆವು. ಠಾಣೆಗೆ ಹೋದಾಗ 8.00 ಗಂಟೆಯಾಗಿತ್ತು. ಆಸ್ಪತ್ರೆಗೆ ಬೆಳಿಗ್ಗೆ 10 ಗಂಟೆಗೆ ಹೋಗಿದ್ದೆವು. ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಬಂದಿಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ. ನಿಪಿ.1 ನ್ನು ಪೋಲೀಸ್ ಠಾಣೆಯಲ್ಲೆ ತಯಾರುಮಾಡಿರುತ್ತಾರೆ. ನಿಪಿ.1 ರಲ್ಲಿರುವ ವಿಷಯವನ್ನು ಚಾಸಾ.4 ರವರು ಹೇಳಿದಂತೆ ಮಾಡಿರುತ್ತಾರೆ. ಸಾದಲಿಗೆ ಪೊಲೀಸರು ಬಂದಾಗ ಅವರು ಮಾಹಿತಿಯನ್ನು ಬರೆದುಕೊಂಡಿರುತ್ತಾರೆ. ಯಾವುದೇ ಬೆರಳಚ್ಚು ಮಾಡಿರುವುದಿಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಕೈ ಬರವಣಿಗೆಯಲ್ಲಿ ಆದ ಪತ್ರದ ಮೇಲೆ ನಾನು ಸಹಿ ಮಾಡಿದ್ದೇನೆ ನಾನು ಬೆರಳಚ್ಚು ಮಾಡಿದ ಯಾವುದೇ ದಾಖಲೆಗೆ ಪೋಲಿಸರು ಸ್ಥಳಕ್ಕೆ ಬಂದಾಗ ಸಹಿ ಮಾಡಿಲ್ಲ. ತದನಂತರ ನಾನು ಠಾಣೆಗೆ ಹೋಗಿಲ್ಲ. ನನಗೂ ಆರೋಪಿತರಿಗೂ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ವಲಸಿಗರಾಗಿದ್ದರಿಂದ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನೆಡೆದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಆಸ್ಪತ್ರೆಗೆ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಶಿಡ್ಲಘಟ್ಟ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಆ ದಾಖಲೆಯು ಪಿರ್ಯಾದಿಯಾಗಿದ್ದು ದಾಖಲೆಯನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು.